



# ಪ್ರಾಣಿಪ್ರೀತಿ ಸ್ವಾಗತಾರ್ಹ; ಆದರೆ...

ನಾಯಿ, ಕೋತಿ ಹಾಗೂ ಪಾರಿವಾಳಗಳಲ್ಲಿ ನಿಮಗೆ ಯಾವುದಿಷ್ಟ ಎಂದು ಪ್ರಶ್ನೆ ಕೇಳಿದರೆ, 'ಮೂರೂ ಇಷ್ಟ' ಎಂದು ಹಲವರು ಹೇಳಬಹುದು. ಪ್ರಾಣಿಪ್ರಿಯರ ಪಾಲಿಗೆ ನಾಯಿ ಹಾಗೂ ಪಾರಿವಾಳ ಬಹು ಮೆಚ್ಚು. ಬೀದಿನಾಯಿಗಳನ್ನು ಮಕ್ಕಳಂತೆ ಸಲಹುವವರು, ಪಾರಿವಾಳಗಳಿಗೆ ದಿನಂಪ್ರತಿ ಕಾಳು ಹಾಕುವವರು ಸಾಕಷ್ಟು ಮಂದಿಯಿದ್ದಾರೆ. ಈ 'ಪ್ರಾಣಿ ಪ್ರೀತಿ' ಪ್ರಶಂಸನೀಯ. ಆದರೆ, ಪ್ರಾಣಿಗಳಿಗೆ ನಾವು ತೋರುವ ಸಹಾನುಭೂತಿ ಕೆಲವು ಸಂದರ್ಭಗಳಲ್ಲಿ ಅವುಗಳಿಗೂ ನಮಗೂ ಅಹಿತವಾಗಿ ಪರಿಣಮಿಸುವುದಿದೆ. ಬೀದಿನಾಯಿ, ಕೋತಿ ಹಾಗೂ ಪಾರಿವಾಳಗಳ ವಿಷಯವನ್ನೇ ನೋಡಿ: ಇವುಗಳಿಂದ ಆಗುತ್ತಿರುವ ಉಪಟಳ ಆಗಾಗ ಸುದ್ದಿಯಾಗುತ್ತಲೇ ಇರುತ್ತದೆ, ಎಲ್ಲರೂ ಒಂದಲ್ಲಾ ಒಂದು ಸಂದರ್ಭದಲ್ಲಿ ತೊಂದರೆ ಅನುಭವಿಸಿರುತ್ತಾರೆ. ಈ ಮೂರು ಜೀವಿಗಳಿಂದ ಆಗುತ್ತಿರುವ ತೊಂದರೆಗಳ ಕುರಿತು ಗಮನಸೆಳೆಯುವ ಈ ಮಾಹಿತಿಪೂರ್ಣ ವಿಶ್ಲೇಷಣೆ, ನಮ್ಮ ಪ್ರಾಣಿಪ್ರೀತಿ ಮತ್ತಷ್ಟು ಸೂಕ್ಷ್ಮಗೊಳ್ಳಲು ಒತ್ತಾಯಿಸುವಂತಿದೆ.

■ ಗುರುರಾಜ್ ಎಸ್. ದಾವಣಗೆರೆ